Reg. No. | | | | | | | | | |

# BCAKAL 103/ BADKAL 103/BSAKAL 103/(Kannada Language)/BAPKAL 103/BFDKAL 105/BGDKAL 105/ BIDKAL 105 (Advanced Kannada)

ಗುಣಾಂಕ ಆಧಾರಿತ ಮೊದಲನೆಯ ಚತುರ್ಮಾಸ ಬಿ.ಸಿ.ಎ./ಬಿ.ಎಸ್ಸಿ.(ಅನಿಮೇಷನ್ ಮತ್ತು ವಿಜ್ಯುವಲ್ ಎಫೆಕ್ಟ್/ಬಿ.ಎ. ಸೆಕ್ಯುರಿಟಿ ಆ್ಯಂಡ್ ಡಿಟೆಕ್ಟಿವ್ ಸೈನ್ಸ್)/ಬಿ.ಎಸ್ಸಿ. (ಫ್ಯಾಷನ್ ಡಿಸೈನ್)/ಬಿ.ಎಸ್ಸಿ. (ಗಾರ್ಮೆಂಟ್ ಡಿಸೈನ್)/ಬಿ.ಎಸ್ಸಿ.(ಇಂಟೀರಿಯರ್ ಡಿಸೈನ್ ಮತ್ತು ಡೆಕೋರೇಶನ್)/ ಬಿ.ಎ.ಎಸ್.ಎಲ್.ಪಿ. ಪದವಿ ಪರೀಕ್ಷೆ, ನವೆಂಬರ್/ಡಿಸೆಂಬರ್ 2015

**(2013-2014 Batch and Onwards)**

**KANNADA**

**Kannada Language/Advanced Kannada**

**ಪತ್ರಿಕೆ – I**

ಸಮಯ : 3 ಗಂಟೆಗಳು

ಗರಿಷ್ಠ ಅಂಕಗಳು : 80

## ಭಾಗ – 1 (ಕಾವ್ಯ)

I. ಅ) ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಉತ್ತರಿಸಿ : **(1×8=8)**

1) ಯುದ್ಧರಂಗದಲ್ಲಿ ತನ್ನ ಹೆತ್ತವರೊಂದಿಗೆ ದುರ್ಯೋಧನನು ಸಮಾಲೋಚಿಸಿದ ಪ್ರಸಂಗವನ್ನು ವಿವರಿಸಿ.

2) ನಳನ ರೂಪವು ಬದಲಾಗಲು ಕಾರಣವೇನು ? ವಿವರಿಸಿ.

ಆ) ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ : **(1×5=5)**

1) 'ದೊಡ್ಡವರ ಸಹವಾಸ' ಕವನದ ಆಶಯವೇನು ?

2) ಹೆತ್ತವರ ಸ್ವಾರ್ಥಕ್ಕೆ ಪ್ರೇಮಿಗಳು ಬಲಿಯಾಗುವ ದುರಂತ 'ಕಾರಿ ಹೆಗ್ಗಡೆಯ ಮಗಳು' ಕವನದಲ್ಲಿ ಹೇಗೆ ವ್ಯಕ್ತವಾಗಿದೆ ?

ಇ) ಕೆಳಗಿನವುಗಳಲ್ಲಿ ಎರಡಕ್ಕೆ ಟಿಪ್ಪಣಿ ಬರೆಯಿರಿ : **(2×3=6)**

1) ಸಿದ್ಧಲಿಂಗಯ್ಯ

2) ಕಾಳ ಬೆಳದಿಂಗಳು ಈ ಸಂಸಾರ

3) ಜರಾಸಂಧ.

ಪು.ತಿ.ನೋ.

II. ಅ) ಕೆಳಗಿನ ಪದ್ಯಭಾಗಗಳಲ್ಲಿ **ಒಂದಕ್ಕೆ** ಸಂದರ್ಭ ಸೂಚಿಸಿ, ಮಹತ್ವವನ್ನು ವಿವೇಚಿಸಿ : **(1×5=5)**

1) ಎಮಗಂಧಯಷ್ಟಿಯಾಗಿ
ರ್ದ ಮಗನೆ ನೀನುಳ್ಳೊಡೆಲ್ಲರೊಳರೆಂದಿರೆ ನಿ
ನ್ನುಮನಿರಿಸದೆ ಕುರುವಂಶಾ
ನಿಮಿತ್ತರಿಪು ಪಾಶಪಾಣಿ ಸವಿನೋಡಿದನೇ

2) ಸುತರ ಪರರೆಡೆಗಿತ್ತು ನಂಬಿದ
ಸತಿಯ ತಂದಡವಿಯಲಿ ಮಲಗಿಸಿ
ಮತಿವಿಕಳನಾದೆನು ಪುರಾಕೃತ ಕರ್ಮಫಲವೈಸೆ
ಕ್ಷಿತಿಯೊಳಾರುಂಟೆನ್ನವೊಲ್ ನಿಜ
ಸತಿಗೆ ತಪ್ಪಿದ ಬಾಹಿರನು ಎಂ
ದತಿಶಯದ ಶೋಕದಲಿ ನಡೆದನು ಶಿವಶಿವಾಯೆನುತ

ಆ) ಕೆಳಗಿನ ವಾಕ್ಯಗಳಲ್ಲಿ **ಎರಡಕ್ಕೆ** ಸಂದರ್ಭವನ್ನು ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ : **(2×3=6)**

1) ಮೀರಿ ಪೋದೊಡೆ ಕಲಿ ಭೀಮನಾಣೆ.

2) ದಾರಿಯ ನಡೆವ ಮಾರಿಯ ಮನೆಗೆ ತಂದಂತೆ.

3) ಕನಸು ಬೀಳುವುದಿಲ್ಲ ಬರಿಗೈಯಲಿ.

III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ : **(5×1=5)**

1) ಕೌಂತೇಯರು ಎಂದರೆ ಯಾರು ?

2) 'ರಾಮಧಾನ್ಯ ಚರಿತೆ' – ಈ ಕೃತಿಯ ಕರ್ತೃ ಯಾರು ?

3) ನಳ ಮಹಾರಾಜ ಯಾವ ಪಟ್ಟಣದ ಅರಸ ?

4) ಶ್ರೀಪಾದರಾಯರ ಕೀರ್ತನೆಗಳ ಅಂಕಿತ ಯಾವುದು ?

5) 'ಕಾರಿ ಹೆಗ್ಗಡೆಯ ಮಗಳು' – ಇದು ಯಾವ ಕವನದ ಅನುವಾದ ?

## ಭಾಗ– 2 (ಗದ್ಯ)

IV. ಅ) ಕೆಳಗಿನ ಪ್ರಶ್ನೆಗಳಲ್ಲಿ **ಒಂದಕ್ಕೆ** ಉತ್ತರಿಸಿ : **(1×8=8)**

1) ಚಾಕೋಲೇಟ್ ಮಾಮನ ಬದುಕಿನ ರಹಸ್ಯ ಕಥೆಯಲ್ಲಿ ಹೇಗೆ ತೆರೆದುಕೊಳ್ಳುತ್ತದೆ ? ವಿವರಿಸಿ.

2) ರಂಗಪ್ಪನ ಬದುಕಿನ ಬವಣೆಯನ್ನು ಚಿತ್ರಿಸಿ.

ಆ) ಕೆಳಗಿನ ಪ್ರಶ್ನೆಗಳಲ್ಲಿ **ಒಂದಕ್ಕೆ** ಉತ್ತರಿಸಿ : **(1×8=8)**

1) ವ್ಯಾಲೇಸರ ತತ್ತ್ವ ಅವರ ಬದುಕಿಗೆ ಹೇಗೆ ಅನ್ವಯವಾಗುತ್ತದೆ ? ತಿಳಿಸಿ.

2) ಮೆಗುಮಿಯ ಕನ್ನಡ ಪ್ರೀತಿಯ ಕುರಿತು ಬರೆಯಿರಿ.

ಇ) ಕೆಳಗಿನವುಗಳಲ್ಲಿ **ಒಂದಕ್ಕೆ ಒಂದು** ಪುಟದಷ್ಟು ಟಿಪ್ಪಣಿ ಬರೆಯಿರಿ : **(1×5=5)**

1) ಊರ ಹೆಂಗಸರ ಬದುಕಿನಲ್ಲಿ ಟಾಕೀಸಿನ ಪ್ರಭಾವ.

2) ಪೆಟ್ರೀಸಿಯಾಳ ಬದುಕಿನ ಯಶೋಗಾಥೆ.

V. ಕೆಳಗಿನ ಪ್ರಶ್ನೆಗಳಲ್ಲಿ **ಒಂದಕ್ಕೆ** ಪ್ರಬಂಧ ಬರೆಯಿರಿ : **(1×5=5)**

1) ಸ್ವಾವಲಂಬನೆಯ ಬದುಕು.

2) ಗ್ರಾಮೀಣ ಜೀವನ.

VI. ಕೆಳಗಿನ ಪ್ರಶ್ನೆಗಳಿಗೆ **ಪ್ರತಿಯೊಂದಕ್ಕೂ ಒಂದು** ವಾಕ್ಯದಲ್ಲಿ ಉತ್ತರಿಸಿ : **(4×1=4)**

1) ಚದುರಂಗರ ನಿಜನಾಮಧೇಯವೇನು ?

2) 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗಳು' – ಇದು ಯಾರ ಕೃತಿ ?

3) ಜೀವವಿಕಾಸವಾದದ ಪಿತಾಮಹ ಯಾರು ?

4) ರೋಮಹರ್ಷಣರ ಮಗನ ಹೆಸರೇನು ?

## ಭಾಗ– 3 (ಕ್ರಿಯಾತ್ಮಕ ಕನ್ನಡ)

VII. ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಉತ್ತರಿಸಿ : (1×8=8)

1) ಜಾಹೀರಾತು ಎಂದರೇನು ? ಅವುಗಳ ಉದ್ದೇಶ ಮತ್ತು ಪಾತ್ರವನ್ನು ವಿವರಿಸಿ.

2) ಭಾಷೆಯಲ್ಲಾಗುವ ಬದಲಾವಣೆಗಳಿಗೆ ಕಾರಣಗಳೇನು ? ತಿಳಿಸಿ.

VIII. ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ : (1×5=5)

1) ಗ್ರಾಹಕರ ಮೇಲೆ ಜಾಹೀರಾತುಗಳ ಪ್ರಭಾವ.

2) ಅರ್ಥ ವ್ಯತ್ಯಾಸದ ಬಗೆಗಳು.

IX. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿ : (2×1=2)

1) ಅಮುಲ್ ಸಂಸ್ಥೆಯ ಘೋಷವಾಕ್ಯ ಯಾವುದು ?

2) 'ಗಾಂಧೀಕ್ಲಾಸು' ಪದದ ಅರ್ಥವೇನು ?

---